ಅಸಲು ದಾವಾ ನಂಃ 11/2025
ಡಿ ಡಬ್ಲ್ಯುಃ1

<u>ದಿನಾಂಕಃ **09-04-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಪಿ.ಟಿ.ಡಿ. ವಕೀಲರಿಂದಃ</u>

ವಾದಿಯ ಮನೆ ಹುಣಸೇಕೊಪ್ಪದಲ್ಲಿ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಉತ್ತರಿಸಿರುತ್ತಾರೆ. ದಾವಾ ಸ್ವತ್ತಿನಿಂದ ವಾದಿಯ ಮನೆ 12 ಕೀ.ಮಿ. ದೂರದಲ್ಲಿ ಇರುತ್ತದೆ ಎಂದರೆ ಸಾಕ್ಷಿ ನನಗೆ ಈಗ ಗೊತ್ತಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ವಾದಿ ದಾವಾ ಸ್ವತ್ತಿನಿಂದ ದೂರ ಇದ್ದ ಕಾರಣ ತಿಂಗಳಿಗೆ ಒಂದು ಎರಡು ಬಾರಿ ಬಂದು ನೋಡಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತಿನಿಂದ ದೂರ ಇರುವ ವಿಚಾರ ತಿಳಿದುಕೊಂಡು ನಾನು 2024 ನೇ ಇಸವಿಯಲ್ಲಿ ದಾವಾ ಸ್ವತ್ತಿಗೆ ಅಕ್ರಮ ಪ್ರವೇಶ ಮಾಡಿ ಶೆಡ್ಡನ್ನು ನಿರ್ಮಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ವಾದಿ ನನಗೆ ದಾವಾ ಆಸ್ತಿಯನ್ನು ಬಿಟ್ಟುಕೊಡುವಂತೆ ಕೇಳಿದಾಗ ನಾನು ಸ್ವಲ್ಪ ಕಾಲಾವಕಾಶ ಕೇಳಿಕೊಂಡು ಗ್ರಾಮಪಂಚಾಯಿಂದ ಬದಲೀ ವ್ಯವಸ್ಥೆ ಮಾಡಿಕೊಂಡ ನಂತರ ಬಿಟ್ಟು ಕೊಡುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೊಟ್ಟ ಭರವಸೆಯ ಮೇರೆಗೆ ವಾದಿ ನನಗೆ ಸ್ವಲ್ಪ ದಿನಗಳವರೆಗೆ ದಾವಾ ಸ್ವತ್ತಿನಲ್ಲಿ ಇರಲು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

2. ಹತ್ತು ತಿಂಗಳ ಕಾಲ ದಾವಾ ಸ್ವತ್ತನ್ನು ಬಿಟ್ಟುಕ ಕೊಡದ ಕಾರಣ ದಿಃ 08.01.2025 ರಂದು ವಾದಿ ತಮ್ಮ ವಕೀಲರ ಮುಖಾಂತರ ನನಗೆ ನೋಟೀಸ್ ನೀಡಿರುತ್ತಾರೆ ಎಂದರೆ ಸರಿ. ನಾನು ಸದರಿ ನೋಟೀಸ್ ಅನ್ನು ಸ್ವೀಕರಿಸಿದ ನಂತರ ಸದರಿ ನೋಟೀಸ್ ಗೆ ಪ್ರತ್ಯುತ್ತರ ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ವಾದಿಗೆ ಭರವಸೆ ಕೊಟ್ಟ ಪ್ರಕಾರ ದಾವಾ ಸ್ವತ್ತನ್ನು ಬಿಟ್ಟುಕೊಟ್ಟಿಲ್ಲ ಎಂದರೆ ಸಾಕ್ಷಿ ನಾನು ಭರವಸೆ ಕೊಟ್ಟಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ಅತ್ತಿಗೆ ಗಂಡ ಶಶಿಕುಮಾರ್ ಇವರು ಕರ್ನಾಟಕ ರಕ್ಷಣಾ ವೇದಿಕೆ ಸಂಘಟನೆಯಲ್ಲಿ ಈ ಹಿಂದೆ ಕೊಪ್ಪ ತಾಲ್ಲೂಕಿನ ರಕ್ಷಣಾ ವೇದಿಕೆಯ ಅಧ್ಯಕ್ಷರು ಆಗಿದ್ದರು ಎಂದರೆ ಸರಿ. ಸದರಿ ಶಶಿಕುಮಾರ್ ರವರು ಈ ಭಾಗದಲ್ಲಿ ರಾಜಕೀಯವಾಗಿ ಪ್ರಬಲ ವ್ಯಕ್ತಿ

ಇರುತ್ತಾರೆ ಎಂದರೆ ಸರಿಯಲ್ಲ. ನಾವು ರಾಜಕೀಯ ಮತ್ತು ತೋಳುಬಲ ಬಳಸಿಕೊಂಡು ವಾದಿಗೆ ಬಿಟ್ಟುಕೊಡಬೇಕಾದ ದಾವಾ ಸ್ವತ್ತಿನ ಸ್ವಾಧೀನವನ್ನು ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

3. ನಾನು ದೂರವಾಣಿ ಸಂಃ 6363476421 ಅನ್ನು ಈ ಹಿಂದೆ ಬಳಸುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ದೂರವಾಣಿ ಸಂಃ ನನ್ನ ಸ್ನೇಹಿತನಾದ ರಮೇಶ್, ಕೊಪ್ಪ ರವರದು ಇರುತ್ತದೆ. ಸದರಿ ದೂರವಾಣಿ ಸಂಖ್ಯೆ ಶ್ರೀಕಾಂತ್ ಬಿನ್ ನಾಗೇಂದ್ರಪ್ಪ, ಬಂಡೇ ಬೊಮ್ಮನಹಳ್ಳಿ, ಚಿತ್ರದುರ್ಗ ತಾಲ್ಲೂಕು ಇವರದ್ದು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ನಾವು 13 ವರ್ಷಗಳ ಕಾಲ ಇರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮಗೆ ಸೇರಿದ್ದು, ನಾವು ಹಕ್ಕುದಾರರು ಮತ್ತು ಮಾಲೀಕರು ಇರುತ್ತೇವೆ ಎಂಬ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ-1 ರಿಂದ 6 ಮತ್ತು 10 ದಾಖಲೆಗಳಿಗೂ, ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗೆ ಕಾನೂನು ಬಾಹಿರವಾಗಿ ಪ್ರವೇಶಿಸಿ ಶೆಡ್ಡನ್ನು ನಿರ್ಮಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

4. ವಾದಿಯು ದಾವಾ ಆಸ್ತಿಯನ್ನು ದಿನಾಂಕ 20.08.2022 ರಂದು ಖತೀಜಾ ಇವರ ಕಡೆಯಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ 08.01.2024 ರಂದು ದಾವಾ ಆಸ್ತಿಯನ್ನು ಮಂಜೂರು ಮಾಡಬೇಕೆಂದು ಸಲ್ಲಿಸಿದ ಯಾವುದೇ ದಾಖಲೆಯನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಈ ಹಿಂದೇ ಸಯ್ಯದ್ ಅಲಿ ಇವರಿಗೆ ಆಶ್ರಯ ಯೋಜನೆಯಡಿ ಮಂಜೂರಾದ ಕಾರಣ ನನಗೆ ಮತ್ತು 2 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು, ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ವಾದಿಯು ಶುದ್ಧ ಕ್ರಯ ಪತ್ರದ ಮುಖಾಂತರ ಖರೀದಿಸಿದ ಕಾರಣ ಅವರು ಸದರಿ ಆಸ್ತಿಗೆ ಸಂಪೂರ್ಣ ಮಾಲೀಕರು ಇರುತ್ತಾರೆ ಎಂದರೆ ಸರಿಯಲ್ಲ.

ಅಸಲು ದಾವಾ ನಂಃ 11/2025
ಡಿ ಡಬ್ಲ್ಯೂಃ1

ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು, ಅಧಿಕಾರ ಇಲ್ಲದೇ ಇದ್ದರೂ ಸಹ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ